ತಿಳಿದಿರಾ, ತರಬೇಕು ನೋಡಿ ಅಲ್ಲಿಂದ!' ಎಂದು ಮೊದಲು ಮಾಡಿ ನಂತರ ಎಲ್ಲರಿಗೂ ಒಪ್ಪಿಗೆಯಾಗುವ ಕಾರಣ ಹೇಳಿಬಿಡುತ್ತಿದ್ದ.

ನಮ್ಮೂರಿನ ಜನಕ್ಕೆ ಮತ್ತೇನು ಕೆಲಸ? ಮಳೆಗಾಲವಾದರಂತೂ ಮುಗಿದೇಹೋಯಿತು. ಕಪ್ಪೆಗೆ ಒದರಾಡುವುದು ಬೇಕಾಗಿದ್ದಂತೆ ನಮ್ಮ ಜನಕ್ಕೆ ಬಾಯಿತುಂಬ ಪಂಚಾಯತಿಕೆ ಬೇಕು. ಹೊತ್ತರ ಮುಂಚಿನ ಹತ್ತು ಹೊಡೆದರೆ ಸಾಕು, ಕರೆಕಳಿಸಿದ ಹಾಗೆ ಜನ ಬಂದು ಟಪಾಲು ಆಫೀಸಿನ ಕಲ್ಲು ತೆಣೆಯ ಮೇಲೆ ನೆರೆಯುತ್ತಿದ್ದರು. ಎಷ್ಟು ಮಳೆ ಹೊಯ್ಯುತ್ತಿದೆ ಎಂಬ ಅರಿವೇ ಆಗುತ್ತಿದ್ದಿಲ್ಲ. ನಾಲ್ಕು ಮಂದಿ ಕೂಡಿದಲ್ಲಿ ಬೇಕೇಬೇಕು ಹರಟೆ. ಅಲ್ಲಿ ಹಾಗೆ ಮಂದಿ ತಂಡ ಕೂಡುವುದಕ್ಕೆ ಕಾರಣವೂ ಇದೆ. ರನ್ನರ ರಾಯಪ್ಪ ನಮ್ಮೂರಿಗೆ ದಿನದ ಮೊದಲಿನ ಆಗಂತುಕ. ಅವನು ಬರುವಾಗ ಸುದ್ದಿ ತರಬೇಕು, ಅದು ಅವನ ಬಾಯಿಯಿಂದ ಕೇಳಬೇಕು. ಪ್ರತಿದಿನ ಏನಾದರೂ ಒಂದು ಹೊಸ ಸುದ್ದಿ ಇದ್ದೇ ಇರುತ್ತಿತ್ತು. ಅದನ್ನು ಕೇಳುವ ಕುತೂಹಲ; ಅದೇ ಮಂದಿಯನ್ನು ದಿನವೂ ಎಳೆದು ತರುತ್ತಿತ್ತು. ಸುದ್ದಿ ತಪ್ಪಿದರೂ ಮಂದಿ ತಪ್ಪುತ್ತಿದ್ದಿಲ್ಲ. ನಮ್ಮೂರಿಗೆ ಟಪಾಲು ಬಂತು ಎನ್ನುವುದಕ್ಕಿಂತ ನಮ್ಮೂರಿಗೆ ರನ್ನರ ರಾಯಪ್ಪ ಬಂದ ಎಂದು ಹೇಳಿದರೆ ಹೆಚ್ಚು ಸತ್ಯ ಹೇಳಿದ ಹಾಗೆ ಆಗುತ್ತದೆ. ರಾಯಪ್ಪನಲ್ಲಿ ಅಂಥ ಸ್ವಭಾವವೂ ಇತ್ತು. ಏನಾದರೂ ಒಂದು ಸುದ್ದಿ ತಂದು ಅದನ್ನು ಬೆಳೆಸಿ ಕೂಡಿಸಿ ಮಂದಿ ಮರುಳಾಗುವ ಹಾಗೆ ಹೇಳಿಬಿಡುತ್ತಿದ್ದ. ಸುತ್ತಲಿನ ಐದಾರು ಊರುಗಳ ಸುದ್ದಿ ಅವನ ಮನೆಯ ಬಾಗಿಲಿಗೆ ಹೇಗೆ ಬಂದು ಮುಟ್ಟುತ್ತಿದ್ದವೋ ಏನೋ. ಹೀಗೆ ಅವನ ಬಾಯಿವರ್ತಮಾನವನ್ನು ನಮ್ಮ ಊರಿನ ಜನ ಪತ್ರ ಹಂಚಿದ ಹಾಗೆ ಊರೆಲ್ಲಾ ಹಂಚಿಬಿಡುತ್ತಿದ್ದರು.

ಹೀಗೆಯೇ ಒಂದು ದಿನ ಕೂಡಿದ ಮಂದಿ ಅವನ ದಾರಿ ಕಾಯುತ್ತಿದ್ದರು. ಶ್ರಾವಣ ಮುಗಿದು ಆಗಲೇ ಒಂದು ತಿಂಗಳಾಗಿರಬೇಕು. ಅಡ್ಡ ಮಳೆ ಹೊಡೆದು ದಿನವೆಲ್ಲ ಮಂಕಾಗಿತ್ತು. ಚಿರಿಚಿರಿ ಮಳೆಯ ಸಣ್ಣ ಹನಿಗಳು ಬೀಳುತ್ತಲೇ ಇದ್ದವು. ಹೊತ್ತು ತಪ್ಪಿ ಬೀಳುವ ಮಳೆಯಲ್ಲಿ ಜನರಿಗೆ ಇನ್ನಿಷ್ಟು ಬೇಸರ ಬಂದುಬಿಟ್ಟಿದೆ. ರಾಯಪ್ಪ ಬರುವ ಹೊತ್ತು ಮೀರಿದೆ. ಮಧ್ಯಾಹ್ನದ ಹನ್ನೆರಡು ಹೊಡೆದು ಅಮ್ಮನವರ ದೇವಸ್ಥಾನದಲ್ಲಿ ಗಂಟೆ ಹೊಡೆಯುತ್ತಿದ್ದರೂ ಅಲ್ಲಿ ಕುಳಿತ ಮಂದಿ ಮಳೆಗೆ ಬಯ್ಯುತ್ತ ರಾಯಪ್ಪನ ದಾರಿ ಕಾಯುತ್ತಿದ್ದರು. ಆಗೀಗ ಕತ್ತು ತಿರುಗಿಸಿ, ಹಣಕಿ, ಬಾಗಿ ಇಂಗ್ಲಿಷ್ ಸಾಲೆಯ ಆಚೆ ಕಣ್ಣು ಹಾಯಿಸುತ್ತಿದ್ದರು. ಒಳಗೆ ಪೋಸ್ಟ್ ಮಾಸ್ತರರು ಊಟಕ್ಕೆ ಹೋಗದೇ, ಹಸಿವೆಯನ್ನೂ ತಳೆಯಲಾರದೇ ಬಂದ ಸಿಟ್ಟನ್ನು ನುಂಗಿ ಮಕ್ಕಳಿಗೆ ಬಯ್ಯುತ್ತಿದ್ದಾರೆ. ನಡುವೊಮ್ಮೆ ಕಪ್ಪು ಚಾಳೀಸಿನ ಭವಾನಿ ಶಂಕರರಾಯರು ಬಂದು 'ಇಂದೇನು ಟಪಾಲು ಸುದ್ದಿ ಇಲ್ಲಾ?' ಎಂದು ಪೋಸ್ಟಮಾಸ್ತರರನ್ನು ಕೇಳಿ ಕಣ್ಮರೆ ಆಗಿಬಿಟ್ಟರು.

'ಹನ್ನೆರಡು ಹೊಡೆದುಹೋಯಿತು. ಗಂಟೆ ಬಹಳವಾಗಿದೆಯಲ್ಲಾ' ಎಂದರು ನಿವೃತ್ತ ಶಾಲಾ ಮಾಸ್ತರರೊಬ್ಬರು ಹಸಿವೆಯನ್ನು ತಡೆಯಲಾರದೆ.

'ಹನ್ನೆರಡಕ್ಕೆ ಏರಿದ ಹೊತ್ತು ಹಾಗಾದರೆ ಈಗ ಇಳಿಯುತ್ತದೆ ಮಾಸ್ತರರೇ. ಇದರ ನಂತರ ಹೊಡೆಯುವ ಗಂಟೆ ಒಂದೇ' ಎಂದು ವಿನೋದ ಪ್ರಿಯನೆಂದು ಎನಿಸಿಕೊಳ್ಳುವ ಹಾಗೆ ಕಣ್ಣು ಮಿಟುಕಿಸಿ, ಕೊಡೆ ಮಡಚಿ ಬೆನ್ನಿಗೆ ಇಡುತ್ತ ಗ್ರಾಮ ಪಂಚಾಯತಿಯ ಸೆಕ್ರೆಟರಿಯು ಹೇಳಹತ್ತಿದ.

ಕುಳಿತ ಮಂದಿ, ಗುಂಡು ಹೊಡೆದು ಕಾಗೆಯ ಹಿಂಡು ಹಾರಿಸಿದ ಹಾಗೆ ಎದ್ದುಬಿಟ್ಟರು. ಬಂದ, ಬಂದ! ಬಂದೇ ಬಿಟ್ಟ!!–ಎಂದು ಕೂಡಿದವರು ಕವಾಯತ್ತಿನಲ್ಲಿ ಹೇಳುವ ಹಾಗೆ ಹೇಳಿದರು.

ದೂರದಲ್ಲಿ ಸಾಲೆಯ ಹಿತ್ತಲ ದಣಪೆ ದಾಟಿ, ಕಲ್ಲುರಾಶಿಯನ್ನು ಏರಿ ಇಳಿದು ರಾಯಪ್ಪ